**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001**

ಸಂಖ್ಯೆ:ಸಿ8[8]ಶಾಶಿಅ/ಅಂವಿ.ಮೀ–01/2015–16

ದಿನಾಂಕ:25.05.2015

**ಸುತ್ತೋಲೆ**

ವಿಷಯ: ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯ ನೇರ ನೇಮಕಾತಿಯಲ್ಲಿ ವಿವಿಧ ಸಮತಳ [Horizontal] ಕಾರ್ಯಗತಗೊಳಿಸುವಾಗ ಅಂಗವಿಕಲರಿಗೆ ಪರಿಗಣಿಸಬೇಕಾದ ರೋಸ್ಟರ್ ಬಿಂದುಗಳಿಗೆ ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95 ದಿ: 20.06.1995

2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 92 ಸೆನೆನಿ 2002 ದಿ: 22.11.2002
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 107 ಸೆನೆನಿ 2005 ದಿ: 05.09.2005
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೆನೆನಿ 2007 ದಿ: 04.01.2008
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಸೆನೆನಿ 2006 ದಿ: 01.09.2009

*********

ಉಲ್ಲೇಖ–1ರ ಸರ್ಕಾರದ ಆದೇಶ ದಿ: 20.06.1995ರ ಆದೇಶದಲ್ಲಿ ರಾಜ್ಯ ಸರ್ಕಾರಿ ಸೇವೆಗಳಲ್ಲಿ ನೇರ ನೇಮಕಾತಿಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 16[4]ರನ್ವಯ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ಪ್ರಮಾಣ ಮತ್ತು ಅದಕ್ಕಾಗಿ ಅನುಸರಿಸಬೇಕಾದ ರೋಸ್ಟರ್ ಅನ್ನು ನಿಗದಿಪಡಿಸಲಾಗಿದೆ.

ಉಲ್ಲೇಖ–2ರ ಸರ್ಕಾರದ ಆದೇಶ ದಿ: 22.11.2002ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಕಲ್ಪಿಸಿರುವ ಸಮತಳ ಮೀಸಲಾತಿಯೂ ಒಳಗೊಂಡಂತೆ ಇತರ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ 20 ರಿಕ್ತ ಸ್ಥಾನಗಳ ಸಮೂಹದಲ್ಲಿ ರೋಸ್ಟರ್ ಬಿಂದುಗಳನ್ನು ನಿಗಧಿಪಡಿಸಲಾಗಿದೆ.

ಉಲ್ಲೇಖ–3ರ ಸರ್ಕಾರದ ಆದೇಶ ದಿ: 05.09.2005ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಸಮೂಹ ಎ ಮತ್ತು ಸಮೂಹ ಬಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಕಲ್ಪಿಸಿರುವ ಶೇಕಡಾ 3ರಷ್ಟು ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು ಸೂಚನೆಗಳನ್ನು ನೀಡಲಾಗಿದೆ. ಈ ಆದೇಶದನ್ವಯ ಸಾಮಾನ್ಯ ಅರ್ಹತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರತಿ ಹಿಂದುಳಿದ ವರ್ಗಗಳಿಗೆ ಪ್ರತ್ಯೇಕವಾಗಿ ಲಭ್ಯವಾಗುವ ರಿಕ್ತ ಸ್ಥಾನಗಳ ಸಮೂಹದಲ್ಲಿ ಪ್ರತಿ ನೂರರ ಒಂದು ಗುಂಪಿನಲ್ಲಿ 19, 59 ಮತ್ತು 99ನೇ ರೋಸ್ಟರ್ ಬಿಂದುಗಳನ್ನು ಅಂಗವಿಕಲ ಅಭ್ಯರ್ಥಿಗಳಿಗಾಗಿ ಮೀಸಲಿರಿಸತಕ್ಕದ್ದೆಂದು ಮತ್ತು ಈ ಮೂರು ಬಿಂದುಗಳಲ್ಲಿ 19ನೇ ಬಿಂದುವನ್ನು ದೃಷ್ಟಿಮಾಂಧ್ಯರಿಂದ [Blindness or low vision] 59ನೇ ಬಿಂದುವಿನಲ್ಲಿ ಶ್ರವಣ ದೋಷವುಳ್ಳವರಿಂದ [Hearing impairment] ಮತ್ತು 29ನೇ ಬಿಂದುವನ್ನು ಚಲನವಲನ ವೈಕಲ್ಯ [Loco motor disability or cerebral palsy] ಇರುವ ಅಭ್ಯರ್ಥಿಗಳಿಗೆ ಮೀಸಲಿರಿಸತಕ್ಕದ್ದೆಂದು ಆದೇಶಿಸಲಾಗಿರುತ್ತದೆ. ಅಲ್ಲದೇ ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆಯುಳ್ಳ ಅಭ್ಯರ್ಥಿಗಳನ್ನು ಈ ಬಿಂದುಗಳೆದುರು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿದೆ.

ಉಲ್ಲೇಖ–4ರ ಸರ್ಕಾರದ ಆದೇಶ ದಿ: 04.01.2008ರ ಆದೇಶದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ನಿಗಧಿಪಡಿಸಿದ್ದ ರೋಸ್ಟರ್‌ನ 19ನೇ ಬಿಂದುವಿಗೆ ಬದಲಾಗಿ ರೋಸ್ಟರ್‌ನ 4ನೇ ಬಿಂದುವನ್ನು ನಿಗಧಿಪಡಿಸಿ ಆದೇಶಿಸಲಾಗಿದೆ. ಇದೇ ರೋಸ್ಟರ್‌ನ್ನು 20 ರಿಕ್ತ ಸ್ಥಾನಗಳ ಬದಲಾಗಿ 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿದಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ ಲಭ್ಯವಾಗುವ ರೋಸ್ಟರ್ ಬಿಂದುಗಳ ಸಂಖ್ಯೆ: 4, 24, 44, 64 ಮತ್ತು 84 ಆಗುತ್ತದೆ. ಈ ರೋಸ್ಟರ್ ಬಿಂದುಗಳು ಸಮೂಹ "ಸಿ" ಮತ್ತು ಸಮೂಹ "ಡಿ" ಗೆ ಸೇರಿದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗೆ ಅನ್ವಯವಾಗುತ್ತದೆ ಎಂದು ಆದೇಶಿಸಲಾಗಿದೆ.

ಉಲ್ಲೇಖ–5ರ ಸರ್ಕಾರದ ಆದೇಶ ದಿ: 01.09.2009ರ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿ ಸಮೂಹ ಸಿ ಮತ್ತು ಸಮೂಹ ಡಿ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ನಿಗಧಿಪಡಿಸಿರುವ ಶೇ.5ರ ಮೀಸಲಾತಿಯಲ್ಲಿ ಶೇ.2ನ್ನು ದೃಷ್ಟಿ ಮಾಂದ್ಯತೆಯುಳ್ಳವರಿಗೆ ತಲಾ ಶೇ.1ನ್ನು ಶ್ರವಣ ದೋಷವುಳ್ಳವರಿಗೆ, ಚಲನವಲನ ವೈಕಲ್ಯವುಳ್ಳವರಿಗೆ

ಮತ್ತು ಕುಷ್ಠ ರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ಬುದ್ಧಿ ಮಾಂದ್ಯತೆ/ಮಾನಸಿಕ ಅಸ್ವಸ್ಥತೆ **[Mental retardation/Mental illness]** ಹೊಂದಿರುವವರಿಗೆ ಮೀಸಲಿಡಲು ಆದೇಶಿಸಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು ದಿ: 04.01.2008ರ ಆದೇಶ ಸಂಖ್ಯೆ: ಸಿಆಸುಇ 53 ಸೆನೆನಿ 2007ರಲ್ಲಿ ನಿಗದಿಪಡಿಸಿರುವ 20 ಬಿಂದುಗಳ ರೋಸ್ಟರ್‌ನ್ನು 100 ರಿಕ್ತ ಸ್ಥಾನಗಳಿಗೆ ಅನ್ವಯಿಸಿ ಅದರಲ್ಲಿ 4, 24ನೇ ಬಿಂದುಗಳನ್ನು ದೃಷ್ಟಿಮಾಂದ್ಯತೆಯುಳ್ಳವರಿಗೆ 44ನೇ ಬಿಂದುವನ್ನು ಶ್ರವಣದೋಷವುಳ್ಳವರಿಗೆ, 64ನೇ ಬಿಂದುವನ್ನು ಚಲನವಲನ ವೈಕಲ್ಯ ಇರುವವರಿಗೆ 84ನೇ ಬಿಂದುವನ್ನು ಕುಷ್ಠ ರೋಗದಿಂದ ಗುಣಮುಖರಾದ ಅಂಗವಿಕಲರಿಗೆ, ಬುದ್ಧಿ ಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಹೊಂದಿರುವವರಿಗೆ ಮೀಸಲಿರಿಸತಕ್ಕದ್ದೆಂದು ಮತ್ತು ಈ ಬಿಂದುಗಳೆದುರು ನಿರ್ದಿಷ್ಟಪಡಿಸಿದ ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಬೇರೆ ಅಂಗವಿಕಲತೆ ಇರುವವರನ್ನು ಆಯ್ಕೆಗೆ ಪರಿಗಣಿಸತಕ್ಕದ್ದೆಂದು ಆದೇಶಿಸಲಾಗಿದೆ. ರಾಜ್ಯದ ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳು, ಸಮೂಹ ಸಿ ಮತ್ತು ಸಮೂಹ ಡಿ ಗೆ ಸೇರಿದ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ದೃಷ್ಟಿ ಮಾಂದ್ಯರಿಗೆ ಇದೇ ತತ್ವವನ್ನು ಅನುಸರಿಸಿ, ಮೀಸಲಾತಿಯನ್ನು ಅನ್ವಯಿಸುವಂತೆ ಕಟ್ಟುನಿಟ್ಟಾಗಿ ಪಾಲಿಸಿ ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಿದೆ.

[ಮಾನ್ಯ ಆಯುಕ್ತರ ಆದೇಶದ ಮೇರೆಗೆ]

ನಿರ್ದೇಶಕರು[ಪ್ರೌಢಶಿಕ್ಷಣ]

ಇವರಿಗೆ

1. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರುಗಳಿಗೆ ಈ ಸುತ್ತೋಲೆಯನ್ನು ಕಳುಹಿಸಿಕೊಡುತ್ತಾ ನಿಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಅನುದಾನಿತ ಶಾಲಾ ಆಡಳಿತ ಮಂಡಳಿಗಳಿಗೆ ಕಳುಹಿಸಿ ಸುತ್ತೋಲೆಯಲ್ಲಿರುವಂತೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಪಾಲಿಸುವಂತೆ ಸೂಚನೆ ನೀಡಲು ತಿಳಿಸಿದೆ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ

ಪ್ರತಿಯನ್ನು ಗೌರವಪೂರ್ವಕವಾಗಿ ಸಲ್ಲಿಸಿದೆ:-

3. ಶ್ರೀ ಗೌತಮ್ ಅಗರ್‌ವಾಲ್, ಪ್ರಧಾನ ಕಾರ್ಯದರ್ಶಿಗಳು, ರಾಷ್ಟ್ರೀಯ ದೃಷ್ಟಿಮಾಂದ್ಯ ಸಂಸ್ಥೆ (NFOTB) #36, 100 ಅಡಿ ರಸ್ತೆ, ವೀರಭದ್ರನಗರ, ಬಿ.ಎಸ್.ಕೆ 3ನೇ ಹಂತ, ಬೆಂಗಳೂರು-85
4. ಕಛೇರಿ ಪ್ರತಿ

\\Typing3server\e\D\EST2\nagendraiah.docx